ಓದುಗರ ಮನಸ್ಸಿನಲ್ಲಿ ಎಂಬಿತ್ಯಾದಿ ಅಭಿಪ್ರಾಯಗಳೂ ಪ್ರಕಟವಾದವು. ಈ ಬಗೆಯ ಚಿಂತನೆಯ ಹಿನ್ನೆಲೆಯಲ್ಲಿ ಅನ್ಯಭಾಷಾ ಮೂಲದ ಪಠ್ಯವೊಂದನ್ನು ತಮ್ಮ ಕಾಲಕ್ಕೆ ಬೇಕಾದಂತೆ ಮರುರೂಪಿಸಿಕೊಳ್ಳುವ ಪ್ರಕ್ರಿಯೆಗೂ ಚಾಲನೆ ದೊರೆಯಿತು.

ಬಿ.ಎಂ.ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತೆಗಳು', ಕುವೆಂಪು ಅವರ 'ರಕ್ತಾಕ್ಷಿ', 'ಬಿರುಗಾಳಿ', ಬೇಂದ್ರೆಯವರ 'ಮೇಘದೂತ' ಇತ್ಯಾದಿ ಕೃತಿಗಳು ಮರುರೂಪಿಸಿದುದರ ಪರಿಣಾಮಗಳೇ ಕನ್ನಡದಲ್ಲಿ ಸೃಜನಶೀಲ ಪ್ರಕ್ರಿಯೆಯ ಭಾಗವಾಗಿ ರೂಪುಗೊಂಡ ರೂಪಾಂತರಗಳು. ಈ ಕೃತಿಗಳಿಗೆ ಆಕರವಾದ ರಚನೆಗಳು ಮೂಲ ಭಾಷೆಯಲ್ಲಿದ್ದವು. ಅವು ಅಲ್ಲಿ ಹೇಗೆಯೇ ಇರಲಿ, ಲಕ್ಷ್ಯಭಾಷೆಯ ಸಂದರ್ಭದಲ್ಲಿ ಸ್ಥಳೀಯ ಸಾಂಸ್ಕೃತಿಕ ಪರಿಸರದಲ್ಲಿ ಮರುರಚಿಸಿಕೊಳ್ಳುವುದರ ಮೂಲಕ ಹೃದ್ಯವಾಗಿಸುವ ಪ್ರಕ್ರಿಯೆ. ಇವುಗಳ ಜೊತೆ ಜೊತೆಗೆ ಅನೇಕ ಕೃತಿಗಳ ಯಥಾವತ್ತಾದ ಭಾಷಾಂತರಗಳು ನಡೆದುವು. ಹಾಗಾಗಿ ವಸಾಹತು ಕಾಲದಲ್ಲಿ ಭಾಷಾಂತರ ಪ್ರಕ್ರಿಯೆಯು ಮೂಲನಿಷ್ಠೆಯ ಭಾಗವಾಗುವುದರ ಜೊತೆಗೆ ಸೃಷ್ಟಿಶೀಲ ಪ್ರಕ್ರಿಯೆಯ ಭಾಗವೂ ಆಗಿದ್ದವು ಎಂಬುದನ್ನು ರೂಪಾಂತರ ಕೃತಿಗಳು ನಿರೂಪಿಸುತ್ತವೆ. ಅನ್ಯಭಾಷೆಯಲ್ಲಿರುವುದನ್ನು ಅನುಸರಿಸಿ ಇನ್ನೊಂದು ಪಠ್ಯವನ್ನು ರೂಪಿಸುವ ಈ ಪ್ರಕ್ರಿಯೆ ಸೃಜನಶೀಲ ಪ್ರಕ್ರಿಯೆಗೆ ಸಮನಾದುದಲ್ಲ ಎಂಬ ಧೋರಣೆ ಮುಂಚೂಣಿಗೆ ಬಂದಿತು. ವಸಾಹತು ಆಡಳಿತದ ಕಾಲದಲ್ಲಿ ಭಾರತೀಯ ಭಾಷೆಗಳಲ್ಲಿ ಹೇಳಿದ ವಿಚಾರಗಳನ್ನು ತಿಳಿಯುವ ಸಲುವಾಗಿ ಭಾಷಾಂತರಗಳು ರೂಪುಗೊಂಡವು. ಭಾರತದ ದೇಶ ಭಾಷೆಗಳಲ್ಲಿನ ಮೌಖಿಕ ಕಥನಗಳ ಆಶಯಗಳನ್ನು, ಜನಾಭಿಪ್ರಾಯಗಳನ್ನು ವಸಾಹತು ಆಡಳಿತವು ತಿಳಿದುಕೊಳ್ಳುವ ಸಲುವಾಗಿ ಭಾಷಾಂತರಗಳು ರೂಪುಗೊಂಡವು. ಭಾರತೀಯ ಭಾಷೆಗಳಲ್ಲಿ ವ್ಯಕ್ತವಾದ ವಿಷಯಗಳನ್ನು ತಿಳಿದುಕೊಳ್ಳುವ ಸಲುವಾಗಿ ಭಾಷಾಂತರಗಳನ್ನು ರೂಪಿಸಲಾಯಿತು. ಇಂಗ್ಲಿಷ್ ಸಾಹಿತ್ಯವನ್ನು ಭಾರತೀಯ ಭಾಷೆಗಳಿಗೂ ತಲುಪಿಸುವ ಉದ್ದೇಶದಿಂದ ಭಾಷಾಂತರಗಳು ನಡೆದವು. ಒಟ್ಟಿನಲ್ಲಿ ವಸಾಹತುಶಾಹಿ ಕಾಲಘಟ್ಟದಲ್ಲಿ ಭಾಷಾಂತರ ಪ್ರಕ್ರಿಯೆ ಎಂಬುದು ಆಡಳಿತ ಚಟುವಟಿಕೆಯ ಭಾಗವೂ ಆಗಿತ್ತು.

ಮುಂದೆ ವಸಾಹತೋತ್ತರ ಸ್ವತಂತ್ರ ಭಾರತದಲ್ಲಿ ಭಾಷೆಗಳ ನಡುವೆ ಭಾವೈಕ್ಯವನ್ನು ಮೂಡಿಸುವುದು ಭಾಷಾಂತರ ಪ್ರಕ್ರಿಯೆಯ ಮುಖ್ಯ ಗುರಿಯಾಗಿತ್ತು. ಅದಕ್ಕಾಗಿಯೂ ಸ್ವತಂತ್ರ ಭಾರತದಲ್ಲಿ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ಮೊದಲಾದ ಸಂಸ್ಥೆಗಳ ಮೂಲಕ ಭಾರತ ಸರಕಾರವು ಪರಸ್ಪರಾನುವಾದ ಪ್ರಕ್ರಿಯೆಗಳನ್ನು ಪ್ರೋತ್ಸಾಹಿಸಿತು. ದೇಶ ಭಾಷೆಗಳು ಮೇಲ್ನೋಟಕ್ಕೆ ಬೇರೆ ಬೇರೆಯಾದರೂ ಅದರ ಒಳಸ್ರೋತವಾಗಿ ಪ್ರವಹಿಸುತ್ತಿರುವುದು ಏಕ ಸಂಸ್ಕೃತಿ ಎಂಬ ತಿಳಿವಳಿಕೆಯನ್ನು ವಿಸ್ತರಿಸಲು ಮುಂದಾಯಿತು. ಬಹುಭಾಷೆಗಳ ನಡುವೆ ಏಕತೆಯನ್ನು ಸಾರುವ ಮಹದುದ್ದೇಶಕ್ಕೆ ಭಾಷಾಂತರ ಪ್ರಕ್ರಿಯೆ



ಪ್ರಮುಖ ಸಾಧನವಾಯಿತು. ಅನೇಕ ಸಾಹಿತ್ಯ ಕೃತಿಗಳು, ವಿಜ್ಞಾನ ಪುಸ್ತಕಗಳು ದೇಶ ಭಾಷೆಗಳ ಬರಹಗಾರರನ್ನು ಭಾರತೀಯ ಲೇಖಕರು ಎಂಬ ನೆಲೆಯಲ್ಲಿ ಪರಿಗ್ರಹಿಸಲು ಭಾಷಾಂತರ ಪ್ರಕ್ರಿಯೆಯ ಮೂಲಕ ಶ್ರಮಿಸಲಾಯಿತು. ಭಾಷಾಂತರ ಕೃತಿಗಳ ಸಂದರ್ಭದಲ್ಲಿ ಕೊಡುಕೊಳುಗೆಗಳ ನಡುವೆ ದಾನಿ ದೀನ ಎಂಬ ಭೇದ ಭಾವವಿಲ್ಲದೆ ಸಮಾನ ನೆಲೆಯಲ್ಲಿ ಪರಿಗಣಿಸಬೇಕೆಂಬ ಕಾಳಜಿ ಕಂಡು ಬಂತು. ಆದರೆ ವಸಾಹತು ಆಡಳಿತ ಹುಟ್ಟು ಹಾಕಿದ ಭಾಷಾಂತರ ಪ್ರಕ್ರಿಯೆಯ ಸ್ವಭಾವ, ಸ್ವರೂಪದಲ್ಲಿ ಹೆಚ್ಚು ಬರವಣಿಗೆಯೇನೂ ಸ್ವತಂತ್ರ ಭಾರತದಲ್ಲಿಯೂ ಇರಲಿಲ್ಲ.